

1989ರಲ್ಲಿ ವಿಶ್ವಕಪ್ ಗೆದ್ದಾಗ ವೆಸ್ಟ್ ಇಂಡೀಸ್ ತಂಡದ ದಿಗ್ಗಜ ಆಟಗಾರರ ಸಂಭ್ರಮ.



ಬರೀ ಎಂಟರಲ್ಲಿ. ರಿಚಿ ರಿಚರ್ಡ್ಸನ್ 1991ರಿಂದ 95ರವರೆಗೆ 24 ಟೆಸ್ಟ್‌ಗಳಲ್ಲಿ ನಾಯಕರಾಗಿ, 11ನ್ನು ಗೆದ್ದುಕೊಟ್ಟರು. ಸೋತದ್ದು ಆರರಲ್ಲಿ ಅಷ್ಟೆ. ಅಲ್ಲಿಂದಾಚೆಗೆ ಶುರುವಾಯಿತು ಯಶೋಗ್ರಾಫ್‌ನ ಇಳಿಕೆ. ಸ್ವತಃ ತಣ್ಣಗಿನ ಪರಿಣಾಮಕಾರಿ ವೇಗದ ಬೌಲರ್ ಆಗಿದ್ದ ಕರ್ಟ್ನಿ ವಾಲ್ಶ್ 22 ಟೆಸ್ಟ್‌ಗಳಲ್ಲಿ ನಾಯಕರಾದರು. ಆರರಲ್ಲಷ್ಟೆ ಗೆದ್ದರು. ಅವರಾದ ಮೇಲೆ ಬ್ರಯಾನ್ ಲಾರಾ 1996ರಿಂದ ಒಂದು ದಶಕ 47 ಟೆಸ್ಟ್‌ಗಳಲ್ಲಿ ತಂಡವನ್ನು ಮುನ್ನಡೆಸಿದರು. ಗೆಲ್ಲಲು ಆಗಿದ್ದು 10ರಲ್ಲಿ ಮಾತ್ರ. ಸೋತಿದ್ದು 26ರಲ್ಲಿ. 11 ಪಂದ್ಯಗಳನ್ನು ಅವರು ಡ್ರಾ ಮಾಡಿಕೊಂಡಿದ್ದಷ್ಟೆ.

ಇದೇ ಕಾಲಘಟ್ಟದಲ್ಲಿ ಕೆಲವು ಕೆರೀಬಿಯನ್ ದೇಶಗಳು ಆರ್ಥಿಕ ಮುಗ್ಗಟ್ಟು ಅನುಭವಿಸಿದವು. ಕ್ರಿಕೆಟ್‌ಗೆ ಹಣಕಾಸಿನ ನೆರವು ಇಳಿಮುಖವಾಗಲು ಇದು ನಾಂದಿ. 'ಕ್ರಿಕೆಟ್ ವೆಸ್ಟ್ ಇಂಡೀಸ್' (ಸಿಡಬ್ಲ್ಯುಐ) 13 ಕೆರೀಬಿಯನ್ ದೇಶಗಳನ್ನು ಪ್ರತಿನಿಧಿಸುವ ಸಂಸ್ಥೆ. 2006ರಲ್ಲಿ ಚುಟುಕು ಕ್ರಿಕೆಟ್ ಪಂದ್ಯಗಳು ಶುರುವಾದದ್ದೇ ಇದಕ್ಕೆ ಜೀವಾನಿಲ ಬಂದಂತಾಯಿತು. ಚುಟುಕು ಕ್ರಿಕೆಟ್ ಕೆಲವು ಟೂರ್ನಿಗಳ ಮಟ್ಟಿಗೆ ಅನುಕೂಲಕರವಾದಷ್ಟು ಹಣ ತಂದಿತ್ತಿತು. ಆಮೇಲೆ ಮತ್ತೆ ಪ್ರಾಯೋಜಕರ ಕೊರತೆ ಶುರುವಾಯಿತು. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಸಿಗುತ್ತಿದ್ದ ಹಣಕ್ಕೂ, 'ಕೆರೀಬಿಯನ್ ಕ್ರಿಕೆಟ್ ಲೀಗ್'ನ (ಸಿಪಿಎಲ್) ಪಂದ್ಯದ ಸಂಭಾವನೆಗೂ ದೊಡ್ಡ ಅಂತರ. ಇದಕ್ಕೇ ಸಿಪಿಎಲ್ ಸಾಕು ಎನ್ನುವ ಮನಃಸ್ಥಿತಿ ಆಟಗಾರರದ್ದಾಗತೊಡಗಿತು.

ಲಾರಾ ನಾಯಕತ್ವದ ನೊಗ ಇಳಿಸಿದ ಮೇಲೆ ಜಿಮ್ಮಿ ಆಡಮ್ಸ್, ಕಾರ್ಲ್ ಹೂಪರ್, ರಿಡ್ಲೆ ಜೇಕಬ್ಸ್, ಶಿವನಾರಾಯಣ್ ಚಂದ್ರಪಾಲ್, ರಾಮ್‌ನರೇಶ್ ಸರವಣ್, ಡರೆನ್ ಗಂಗಾ, ಕ್ರಿಸ್ ಗೇಲ್, ಡ್ವೇನ್ ಬ್ರಾವೊ, ಫ್ಲಾಯ್ಡ್ ರೀಫರ್, ಡರೆನ್ ಸ್ಯಾಮಿ, ದಿನೇಶ್ ರಾಮ್‌ದಿನ್, ಜೇಸನ್ ಹೋಲ್ಡರ್, ಕ್ರೆಗ್ ಬ್ರಾಥ್‌ವೈಟ್ ಎಲ್ಲರೂ ಸೇರಿ 185 ಟೆಸ್ಟ್ ಪಂದ್ಯಗಳನ್ನು ನಾಯಕರಾಗಿ ತಂಡ ಮುನ್ನಡೆಸಿದ್ದಾರೆ.



ಶಿಸ್ತುಬದ್ಧ ವೇಗದ ಬೌಲಿಂಗ್‌ನಿಂದಾಗಿ ವಿಂಡೀಸ್ ತಂಡದ ಬೆನ್ನೆಲುಬಾಗಿದ್ದ ಕರ್ಟ್ನಿ ವಾಲ್ಶ್